Mr. SPEAKER.—The hon. Member is not correct. In terms of the rules, the Chair gave a direction. It has to be obeyed. Disobedience is both of the Chair and the rule, Sri Vatal Nagaraj will please obey.

Sri H. N. NANJE GOWDA.—Violation of the rule is not a contempt of the House or Chair.

ಶ್ರೀ ಬಿ. ಪರಮೇಶ್ವರಪ್ಪ.—ಸ್ವಾಮಿ, ಇದುವರೆಗೂ ಈ ಸಭೆಯ ಗೌರವವನ್ನು ಕಾಪಾಡಬೇಕೆಂಬ ವಿಚಾರದಲ್ಲಿ ಈ ಪಕ್ಷದ ಮುಖಂಡರಿಗೂ, ಆ ಪಕ್ಷದ ಮುಂಬಡರಿಗೂ ತಮಗೂ ಬಹಳ ಕಳಕಳಿಯಾಗಿದೆ ಎನ್ನುವುದನ್ನು ನಾನು ಅರಿತಿದ್ದೇನೆ. ಈಗ ತಾನೇ ಮಾನ್ಯ ನಾಗನಗೌಡರು—ಈ ಪಕ್ಷದ ಮುಖಂಡರು ಮತ್ತು ಪಾರ್ಲಿಮೆಂಟರಿ ಸಚಿವರು, ಆ ಪಕ್ಷದಲ್ಲಿರುವ ಹಿರಿಯ ಸದಸ್ಯರು ಸೇರಿ ತಿಳಿಯಾದ ವಾತಾವರಣ ಆಗುವುದಕ್ಕೆ ಅವಕಾಶವಾಗುವಂತೆ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಬೇಕೆಂದು ಸಲಹೆಮಾಡಿದ್ದಾರೆ. ಯಾವುದಾದರೂ ರೀತಿಯಿಂದ ಒಪ್ಪಿಗೆಯಾಗಿ, ವಾತಾವರಣ ತಿಳಿಯಾಗಿ ಸಭೆಯ ಗೌರವ ಉಳಿಯಬೇಕು ಎನ್ನುವುದು ನಮ್ಮ ಅಭಿಪ್ರಾಯವೂ ಆಗಿದೆ. ಅದಕ್ಕಾಗಿ ಸಭೆಯನ್ನು ಹತ್ತು ನಿಮಿಷಕಾಲ ಮುಂದಕ್ಕೆ ಹಾಕಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Of course, I am likely to accept the suggestion. But one thing I must make clear. I may adjourn the House again for 10 minutes in the interest of maintaining the dignity of the House. But, of course now, I cannot give consent to any motion unless the order is obeyed first. We shall rise now and meet at 6 p. m.

The House adjourned at Fifty Minutes past Five of the Clock and re-assembled at Forty Minutes past Six of the Clock.

[MR. SPAEKER in the Chair.]

(Hon. member Sri Vatal Nagaraj was not in the House)

Statement by Deputy Minister for Education *re:* leakage of the S.S.L.C. Examination Question Papers

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಆಗಿರತಕ್ಕ ಮಾನ್ಯ ಶ್ರೀ ಶಿವಪ್ಪನವರು ಒಂದೆರಡು ಗಂಟೆಗಳ ಮುಂಚೆ, ಒಂದು ಪ್ರಶ್ನೆಪತ್ರಿಕೆಯನ್ನು ಈ ಸಭೆಯ ಗಮನಕ್ಕೆ ತಂದು ನಾಳೆಯಾಗುವ ಪರೀಕ್ಷೆ ಪ್ರಶ್ನೆಪತ್ರಿಕೆ ಇವತ್ತೇ ಬಂದಿದೆ ಎಂಬ ವಿಷಯವನ್ನು ಈ ಸಭೆಯ ಗಮನಕ್ಕೆ ತಂದರು. ನಾನು ದಿಗ್ಭ್ರಾಂತಿಯಾದೆ. ಇಂತಹ ಒಂದು ವಿಷಯದ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ರೀತಿಯ ತೀವ್ರಭಾವನೆ ಇದೆಯೋ ಅದಕ್ಕಿಂತಲೂ ಹೆಚ್ಚಿಗೆ ತೀವ್ರ ಭಾವನೆ ಸರ್ಕಾರಕ್ಕೂ ಇದೆ. ಇಂತಹ ವಿಷಯಗಳು ನಡೆಯಬಾರದು ಎಂಬ ಬಗ್ಗೆ ಸರ್ಕಾರ ಮುನ್ನೆಚ್ಚರಿಕೆ ಕ್ರಮವನ್ನು ಅನುಸರಿಸುತ್ತಿದೆ. ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯವನ್ನು ಈ ಸಭೆಯಲ್ಲಿ ತಂದಕೂಡಲೇ. ತಕ್ಷಣವೇ ಕಾರ್ಯದರ್ಶಿಯವರನ್ನು ಕರೆಸಿ, ಆ ಬಗ್ಗೆ ವಿಚಾರ ಮಾಡಿ ವಿವರಗಳನ್ನು ಪಡೆದುಕೊಂಡೆ. ಅಲ್ಲದೆ ಪರೀಕ್ಷಾಮಂಡಲಿಯ ಅಧ್ಯಕ್ಷರನ್ನೂ ಸಹ ಕರೆಸಿ ಅವರಿಂದಲೂ ಸಹ ಆ ಬಗ್ಗೆ ವಿವರವಾಗಿ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಕೆಲವು ಗೆಸ್ ಪೇಪರ್ಸ್ ಎಂಬುದಾಗಿ ಪರೀಕ್ಷಾ ಪ್ರಶ್ನೆಪತ್ರಿಕೆಗಳ ಮಾದರಿಯಲ್ಲಿ ಪ್ರತಿವರ್ಷವೂ ನಮ್ಮ ಸಮಾಜದಲ್ಲಿ ಅದರಲ್ಲಿಯೂ ನಮ್ಮ ಜನರಲ್ಲಿ ಕೆಲವರು ತಯಾರುಮಾಡತಕ್ಕ ಪ್ರವೃತ್ತಿಯನ್ನು ಇಟ್ಟುಕೊಂಡಿದ್ದಾರೆ.

ಈ ತರಹದಲ್ಲಿ ಜನಗಳಲ್ಲಿ ಒಂದು ಉದ್ರೇಕವಾದ ಸುದ್ದಿಯನ್ನು ಹುಟ್ಟಿಸಿ ಇಂತಹ ಪ್ರಶ್ನಪತ್ರಿಕೆ ಬಂದಿದೆಯೆಂದು ಹೇಳುವುದೂ ಉಂಟು. ಇಂತಹ ಗೆಸ್ ಪೇಪರ್‌ಗಳು ಬೇಕಾದಷ್ಟಿವೆ. ಇದು ಒಂದೇ ಅಲ್ಲ. ಅನೇಕ ಗೆಸ್ ಪೇಪರ್‌ಗಳನ್ನು ಮಾಡಿದ್ದಾರೆ. ಪತ್ರಿಕೆಗಳಲ್ಲಿಯೂ ಪ್ರಿಂಟ್ ಮಾಡಿದ್ದಾರೆ. ಗೆಸ್ ಪೇಪರ್‌ಗಳಲ್ಲಿ ಇದು ಒಂದು. ಇದು ನಿಜವಾದ ಪ್ರಶ್ನೆಪತ್ರಿಕೆ ಅಲ್ಲ. ಈಗಿರುವ ಪರೀಕ್ಷಾಮಂಡಲಿಯು ಆಶ್ರಯದಲ್ಲಿ ನಮ್ಮ ಪರೀಕ್ಷೆಗಳು ಬಹಳ ಭದ್ರವಾದ ರೀತಿಯಲ್ಲಿ ಬಹಳ ರಹಸ್ಯವಾಗಿ, ಎಲ್ಲಾ ನಿಬಂಧನೆಗಳಿಗೊಳಪಟ್ಟು ನಡೆಯುತ್ತಾ ಇದೆ. ಆದ್ದರಿಂದ ಅದು ಆ ರೀತಿ ಸ್ಫೋಟವಾಗುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಚನ್ನಯ್ಯ.—ಅದನ್ನು ಬದಲಾಯಿಸುತ್ತೀರಿ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೂಲ ಪ್ರಶ್ನೆಪತ್ರಿಕೆಯೊಂದಿಗೆ ಹೋಲಿಸಿ ನೋಡುವುದಕ್ಕೆ ಅದು ಅದರ ಪ್ರತಿ ಹೌದೋ ಅಲ್ಲವೋ ? ಇದು ಅಷ್ಟಾಗಿ ಅಚ್ಚಾದ ಪ್ರಶ್ನೆಪತ್ರಿಕೆಯೂ ಅಲ್ಲ. ಟೈಪ್ಡ್ ಕಾಪಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇದನ್ನು ಗೆಸ್ ಪೇಪರ್ ಎಂದು ಹೇಳಬಹುದೇ ವಿನಹ ಮೂಲ ಪ್ರಶ್ನೆಪತ್ರಿಕೆ ಸ್ಫೋಟವಾಗಿದೆಯೆಂದು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಹಾಗಿದ್ದಪಕ್ಷದಲ್ಲಿ ಅದರ ಬಗ್ಗೆ ಎಲ್ಲಾ ವಿಧವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೂ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆಯೆಂದೂ ನಾನು ಅಭಿಪ್ರಾಯಪಡುತ್ತೇನೆ. ಈ ಸಂಬಂಧದಲ್ಲಿ ಮಾನ್ಯ ಶ್ರೀ ಶಿವಪ್ಪನವರು ಹೇಳಿದಂತೆ ಅನುಸಂಗಿಕವಾಗಿ ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿದಂಥ ಅಭಿಪ್ರಾಯದ ಬಗ್ಗೆ ಒಂದು ಅಂಶವನ್ನು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ಇದರಲ್ಲಿ ಎಷ್ಟು ಅಧಿಕಾರವಿದೆಯೋ ಅಷ್ಟೇ ಜವಾಬ್ದಾರಿ, ಹೊಣೆಗಾರಿಕೆ ಉಪಮಂತ್ರಿಗಳಿಗೂ ಇದೆ. ನಾನು ಮಾನ್ಯ ಮಂತ್ರಿಗಳಿಗೆ ಸಹಾಯಕನಾಗಿ ಕೆಲಸಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಯನ್ನು ನಾನು ವಹಿಸುತ್ತಿದ್ದೇನೆ. ಅವರು ನನಗೆ ವಹಿಸತಕ್ಕ ಜವಾಬ್ದಾರಿಯನ್ನು, ಅವರ ವಿಶ್ವಾಸಕ್ಕೆ ತಕ್ಕಂತೆ ನಿರ್ವಹಿಸುತ್ತಿದ್ದೇನೆ. ಮಂತ್ರಿಗಳಲ್ಲಿ ಹಾಗೂ ಉಪಮಂತ್ರಿಗಳಲ್ಲಿ ಏನೋ ಒಂದು ವಿಧವಾದ ವೈಮನಸ್ಸು ಉಂಟುಮಾಡುವ ರೀತಿಯಲ್ಲಿ ಮಾತನಾಡುತ್ತಾ ಇರುವುದು ಸರಿಯಲ್ಲ. ಅದನ್ನು ನಾನು ಪ್ರತಿಭಟಿಸುತ್ತೇನೆ. ಮಂತ್ರಿಗಳಷ್ಟೇ ನಮಗೂ ಜವಾಬ್ದಾರಿ ಇದೆ. ಎಲ್ಲಿಯವರೆಗೆ ಮಾನ್ಯ ಮಂತ್ರಿಗಳಿಗೆ ನನ್ನ ಕೆಲಸದಲ್ಲಿ ವಿಶ್ವಾಸ ಇರುತ್ತದೋ ಅಲ್ಲಿಯವರೆಗೂ ಆಡಳಿತ ಚೆನ್ನಾಗಿ, ಸುಭದ್ರವಾಗಿ ನಡೆಯುತ್ತದೆ. ಆದ್ದರಿಂದ ಯಾರೇ ಮಾನ್ಯಸದಸ್ಯರಾಗಲೀ ಅಂತಹ ಯಾವುದೇ ವಿಧವಾದ ಸಂಶಯ ಇಟ್ಟುಕೊಳ್ಳುವುದು ಅವಶ್ಯಕವಲ್ಲ. ಈ ವಿಷಯ ಮಾನ್ಯ ವಿರೋಧ ಪಕ್ಷದ ಸದಸ್ಯರು ಇಲ್ಲಿ ತೋರಿಸಿರತಕ್ಕ ಪ್ರಶ್ನೆಪತ್ರಿಕೆ ಕೇವಲ ಗೆಸ್ ಪೇಪರ್.

ಶ್ರೀ ಎಸ್. ಚನ್ನಯ್ಯ.—ಇವತ್ತು ಗೆಸ್ ಪೇಪರ್ ಎಂದು ಹೇಳುತ್ತೀರಿ. ನಾಳೆ ಬೇರೆ ಪ್ರಿಂಟ್ ಮಾಡಿಸಿ ಕೊಡುವುದಕ್ಕೆ ಆಗುವುದಿಲ್ಲವೇ ? ಬೇಕು ಎಂದರೆ ಬೇರೆ ಮಾಡಿಸಿ.

ಶ್ರೀ ಕೆ. ವಿ. ಶಂಕರಗೌಡ.—ಒಂದುವೇಳೆ ಪೇಪರ್ ಆ ರೀತಿ ಏನಾದರೂ ಹೊರಗೆ ಬಂದಿದ್ದರೆ ಅದನ್ನು ಬಚ್ಚಿಟ್ಟು ಇಡಬೇಕೆಂದು ಸರ್ಕಾರದ ಉದ್ದೇಶವಲ್ಲ. ಅದನ್ನು ವಿಚಾರಮಾಡಿ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಶ್ರೀ ಚನ್ನಯ್ಯನವರ ಅಭಿಪ್ರಾಯ ಆ ರೀತಿ ಇರಬಹುದೇ ವಿನಹ ಸರ್ಕಾರ ಅಷ್ಟು ಕೀಳುಮಟ್ಟಕ್ಕೆ ಹೋಗುವುದಿಲ್ಲ. ಅದನ್ನು ಬಚ್ಚಿಟ್ಟು ರಾತ್ರಿಯಲ್ಲಿಯೇ ಬೇರೆ ಪ್ರಶ್ನೆಪತ್ರಿಕೆ ಅಚ್ಚುಮಾಡುವ ಪ್ರಮೇಯ ಬರುವುದಿಲ್ಲ.

ಶ್ರೀ ಎಸ್. ಚನ್ನಯ್ಯ.—ನಾನು ಸರ್ಕಾರವನ್ನು ಕೀಳುಮಟ್ಟಕ್ಕೆ ತರತಕ್ಕವನಲ್ಲ. ಇದು ಬಹಿರಂಗವಾಗಿದೆ. ಅದಕ್ಕೋಸ್ಕರ ಬೇರೆ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಕೆ. ವಿ. ಶಂಕರಗೌಡ.—ಇದು ನಿಜವಾಗಿ ಬಹಿರಂಗವಾಗಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ, ಪರೀಕ್ಷೆ ಕಾಲದಲ್ಲಿ ಇಂತಹ ಗೆಸ್ ಪೇಪರ್‌ಗಳು ಬರುವುದೂ ಉಂಟು. ಏಕೆಂದರೆ ತಜ್ಞರು ಇರುತ್ತಾರೆ. ಅವರು ತಯಾರುಮಾಡುತ್ತಾರೆ. ಕೆಲವು ದಿನಗಳ ಹಿಂದೆ ಡೆಕನ್ ಹೆರಾಲ್ಡ್‌ನಲ್ಲಿ ಪ್ರಾಬಬಲ್ ಕೊಶ್ಚನ್ಸ್ ಎಂಬುದಾಗಿ ಪ್ರಶ್ನೆಪತ್ರಿಕೆಯ ಹಾಗೆ ಒಂದು ಪಟ್ಟಿ ಬಂದಿತ್ತು. ಸುಮಾರು 2-3 ವರ್ಷಗಳ ಪ್ರಶ್ನೆಗಳನ್ನು ನೋಡಿದರೆ, ಇದು ಒಂದು ಗೆಸ್ ಪೇಪರ್‌ನಂತೆ ಕಾಣುತ್ತದೆ. ಆದರೆ ಮೂಲ ಪ್ರಶ್ನೆಪತ್ರಿಕೆ ಔಟ್ ಆಗಿಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ವಿದ್ಯಾ ಸಚಿವರು ಮತ್ತು ಉಪಸಚಿವರು ಇದು ಒಂದು ಗೆಸ್ ಪೇಪರ್ ಇರಬಹುದೆಂದು ಹೇಳುತ್ತಾರೆ. ಪರೀಕ್ಷೆಯ ಪವಿತ್ರತೆ ಹಾಳು ಆಗುವುದನ್ನು ನೋಡಲಿಕ್ಕೆ ನಾನು ತಯಾರು ಇಲ್ಲ. ಇದರ ಪವಿತ್ರತೆಯನ್ನು ಕಾಪಾಡುವುದರಲ್ಲಿ ನನಗೆ ನಿಮಗಿಂತಲೂ ಹೆಚ್ಚಿನ

(ಶ್ರೀ ಎಸ್. ಶಿವಪ್ಪ)

ಅಭಿಮಾನವಿದೆ. ಇಂಗ್ಲಿಷ್ ಮೊದಲನೆಯ ಮತ್ತು ಎರಡನೆಯ ಪೇಪರ್ ಸಹ ಅದೇ ರೀತಿ ಆಗಿದೆ. ಅದು ನನ್ನ ಊರಿನಲ್ಲಿಯೇ ಇದೆ. ಅದು ನಾಳೆ ಬರುತ್ತದೆ. ಇದರಿಂದ ಪ್ರಶ್ನೆಗಳಿಗೆ ಬೆಲೆ ಇಲ್ಲದೆ ಹೋಗುತ್ತದೆ ಅದನ್ನು ವಿಚಾರಮಾಡಬೇಕಾ. ನೀವು ಬದಲಾಯಿಸುತ್ತೀರೊ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಇವತ್ತು ಏನು ಪ್ರಿಂಟ್ ಆಗಿದೆಯೋ ಅದರ ಒಂದು ನಕಲನ್ನು ನನಗೆ ಕೊಟ್ಟರೆ ಅದನ್ನೂ ಇದನ್ನೂ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಕೆ. ಎ. ಶಂಕರಗೌಡ.—ನಾಳೆ ಪರೀಕ್ಷೆಯಾದಮೇಲೆ ಅವರ ಕೈಗೆ ಕೊಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಸೆಕೆಂಡ್ ಪೇಪರ್ ಪ್ರಿಂಟ್ ಆಗಿರುವುದು ಕೊಟ್ಟರೆ ಸಾಕು. ನಾನೇ ನಿಮ್ಮ ಕೋಣೆಗೆ ಬರುತ್ತೇನೆ, ಬಹಿರಂಗ ಬೇಡ.

Calling Attention on a Matter of urgent Public Importance *re* : Fire Accident at Mallalichannehalli of Tarikere Taluk

Sri D. B. KALMANKAR.—Sir, I call the attention of the Minister for Revenue to the fire accident at Mallalichannehalli village of Tarikere Taluk.

Sri H. V. KOUJALGI (Minister for Revenue).—Sir, a fire accident took place at about 2.00 p.m. on 21st March 1969 at Malalichennenahalli village of Tarikere taluk Chikmagalur district which is about six miles away from Tarikere. Along the main road, between Tarikere and Bhadravathi, at Malali-channenahalli, the workers of Tunga Bhadra Sugar Farm have been living in Huts unauthorisedly put up on Government land. Most of them were Harijans. On 21st March 1969 one of these huts caught fire and the fire spread to the other 33 huts which were burnt down. Four children are reported to have been burnt to death, three of them belonging to one family. Their particulars are indicated below :

1. 11 Year Old Girl d/o Sri Hanumanthaiah
2. 4 Year Old boy s/o do
3. 1½ Year Old girl d/o do
4. 2 Years Old girl d/o Sri Thimmaiah.

There has been no loss of cattle. The total loss is estimated to be nearly Rs. 10,340. The local Revenue Inspector, nearby villagers and employees of Tunga Bhadra Sugar Farm immediately rushed to the spot and afforded immediate relief to the sufferers.

The victims have been provided temporary accommodation near the place of fire accident in a shed belonging to Tunga Bhadra Sugar Company. The authorities of the Sugar Company have also made arrangements to feed the affected persons for a few days. Some of the residents of the neighbouring village of Gopala have come forward to take up this work thereafter.